# ಕರ್ನಾಟಕ ವಿಧಾನಪರಿಷತ್ತು

<table>
<tr><td>ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ</td><td>117(1023)</td></tr>
<tr><td>ಸದಸ್ಯರ ಹೆಸರು</td><td>ಶ್ರೀ ಎಂ.ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು)</td></tr>
<tr><td>ವಿಷಯ</td><td>ಸಾಮಾಜಿಕ ಭದ್ರತಾ ಪಿಂಚಣಿ ಯೋಜನೆ</td></tr>
<tr><td>ಉತ್ತರಿಸಬೇಕಾದ ದಿನಾಂಕ</td><td>21-09-2022</td></tr>
<tr><td>ಉತ್ತರಿಸುವ ಸಚಿವರು</td><td>ಕಂದಾಯ ಸಚಿವರು</td></tr>
<tr><th>ಪ್ರಶ್ನೆ</th><th>ಉತ್ತರ</th></tr>
<tr><td>ಅ) ಸರ್ಕಾರವು ವಿವಿಧ ಸಾಮಾಜಿಕ ಭದ್ರತಾ ಪಿಂಚಣಿ ಯೋಜನೆಗಳ ಮೂಲಕ ವೃದ್ಧರು, ಅಂಗವಿಕಲರು, ನೊಂದವರು ಹೀಗೆ ಬಹುತೇಕ ಅವಲಂಬಿತ ವರ್ಗದವರಿಗೆ ಆರ್ಥಿಕ ಭದ್ರತೆಯನ್ನು ಒದಗಿಸುತ್ತಿದೆಯೇ;</td><td>ಸರ್ಕಾರವು ಬಡತನ ರೇಖೆಗಿಂತ ಕೆಳಗಿರುವ ಅಸಹಾಯಕ ವರ್ಗದ ವೃದ್ಧರು, ವಿಧವೆಯರು, ಅಂಗವಿಕಲರು, ಅವಿವಾಹಿತ/ ವಿಚ್ಛೇದಿತ ಮಹಿಳೆಯರಿಗೆ, ಲಿಂಗತ್ವ ಅಲ್ಪಸಂಖ್ಯಾತರಿಗೆ, ಸಾಲಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತ ಪತ್ನಿಯರಿಗೆ ವಿಧವಾ ವೇತನ, ಆಸಿಡ್ ದಾಳಿಗೊಳಗಾದ ಮಹಿಳೆಯರಿಗೆ ಹಾಗೂ ಎಂಡೋಸಲ್ಫಾನ್ ಸಂತ್ರಸ್ತರಿಗೆ ಆರ್ಥಿಕ ಭದ್ರತೆ ಒದಗಿಸುವ ನಿಟ್ಟಿನಲ್ಲಿ ಈ ಕೆಳಕಂಡ ಸಾಮಾಜಿಕ ಭದ್ರತಾ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ.
<table>
<tr><th>ಕ್ರ ಸಂ</th><th>ಯೋಜನೆಯ ಹೆಸರು</th></tr>
<tr><td>1</td><td>ಇಂದಿರಾಗಾಂಧಿ ವೃದ್ಧಾಪ್ಯ ವೇತನ</td></tr>
<tr><td>2</td><td>ಇಂದಿರಾಗಾಂಧಿ ವಿಧವಾ ವೇತನ</td></tr>
<tr><td>3</td><td>ಇಂದಿರಾಗಾಂಧಿ ಅಂಗವಿಕಲ ವೇತನ</td></tr>
<tr><td>4</td><td>ಸಂಧ್ಯಾಸುರಕ್ಷಾ ವೇತನ</td></tr>
<tr><td>5</td><td>ಮನಸ್ವಿನಿ ಯೋಜನೆ</td></tr>
<tr><td>6</td><td>ಮೈತ್ರಿ ಯೋಜನೆ</td></tr>
<tr><td>7</td><td>ಸಾಲಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತ ಪತ್ನಿಯರಿಗೆ ವಿಧವಾ ವೇತನ</td></tr>
<tr><td>8</td><td>ಆಸಿಡ್ ದಾಳಿಗೊಳಗಾದ ಮಹಿಳೆಯರಿಗೆ ಸಹಾಯಧನ</td></tr>
<tr><td>9</td><td>ಎಂಡೋಸಲ್ಫಾನ್ ಸಂತ್ರಸ್ತರಿಗೆ ಮಿತವೇತನ</td></tr>
</table></td></tr>
<tr><td>ಆ) ಒದಗಿಸುತ್ತಿದ್ದಲ್ಲಿ ಯಾವ ಯಾವ ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಆರ್ಥಿಕ ಭದ್ರತೆಯನ್ನು ಒದಗಿಸಲಾಗಿದೆ; ವಿವರಗಳನ್ನು ಒದಗಿಸುವುದು;<br><br>ಇ) ಎಷ್ಟು ಜನರಿಗೆ ಆರ್ಥಿಕ ಭದ್ರತೆಯನ್ನು ನೀಡಲಾಗಿದೆ. ಒಂದು ವೇಳೆ ಆರ್ಥಿಕ ಭದ್ರತೆಯನ್ನು ನೀಡದಿದ್ದಲ್ಲಿ ಮುಂದಿನ ದಿನಗಳಲ್ಲಿ ಮೇಲಿನ ಅವಲಂಬಿತ ಜನರಿಗೆ ಆರ್ಥಿಕ ಭದ್ರತೆ ನೀಡುವ ಕಾರ್ಯಕ್ರಮಗಳು ಇವೆಯೇ; (ಸಂಪೂರ್ಣ ವಿವರವನ್ನು ಒದಗಿಸುವುದು)</td><td>ಎಂಡೋಸಲ್ಫಾನ್ ಮಿತವೇತನ ಯೋಜನೆಯು ದಕ್ಷಿಣ ಕನ್ನಡ, ಉತ್ತರಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಮಾತ್ರ ಅನುಷ್ಠಾನದಲ್ಲಿದ್ದು, ಉಳಿದಂತೆ ಎಲ್ಲಾ ಸಾಮಾಜಿಕ ಭದ್ರತಾ ಯೋಜನೆಗಳನ್ನು ರಾಜ್ಯಾದ್ಯಂತ ಅನುಷ್ಠಾನಗೊಳಿಸಲಾಗಿದೆ. ಪ್ರಸ್ತುತ 75.60 ಲಕ್ಷ ಫಲಾನುಭವಿಗಳಿಗೆ ವಿವಿಧ ಸಾಮಾಜಿಕ ಭದ್ರತಾ ಪಿಂಚಣಿ ಯೋಜನೆಗಳಡಿ ಪಿಂಚಣಿ ಸೌಲಭ್ಯ ನೀಡಿ ಆರ್ಥಿಕ ಭದ್ರತೆಯನ್ನು ಒದಗಿಸಲಾಗಿದೆ.<br><br>ಪಿಂಚಣಿ ಯೋಜನೆಗಳ ಸೌಲಭ್ಯದಿಂದ ಅರ್ಹ ಫಲಾನುಭವಿಗಳು ವಂಚಿತರಾಗದಂತೆ ತಡೆಯಲು ಕುಟುಂಬ ದತ್ತಾಂಶದಿಂದ ನಾಗರೀಕರ ಆದಾಯ ಮತ್ತು ವಯೋಮಿತಿಯ ಮಾಹಿತಿ ಪಡೆದು ಈಗಾಗಲೇ "ಮನೆ ಬಾಗಿಲಿಗೆ ಮಾಸಾಶನ" ಅಭಿಯಾನವನ್ನು 2020-21 ರಲ್ಲಿ</td></tr>
</table>

| | |
|---|---|
| | ಜಾರಿಗೊಳಿಸಲಾಗಿದೆ. ಈ ಅಭಿಯಾನದಡಿ ಸ್ವಯಂಪ್ರೇರಿತವಾಗಿ ಅರ್ಹ ಫಲಾನುಭವಿಗಳನ್ನು ಗುರುತಿಸಿ ಅರ್ಜಿರಹಿತ ನವೋದಯ ಮೊಬೈಲ್ ಅಪ್ ಮೂಲಕ ಪರಿಶೀಲನೆ ನಡೆಸಿ ಮಂಜೂರಾತಿ ನೀಡಲಾಗುತ್ತಿದ್ದು, ಇದುವರೆವಿಗೆ ಒಟ್ಟಾರೆ 71,632 ಫಲಾನುಭವಿಗಳಿಗೆ ಸ್ವಯಂಪ್ರೇರಿತವಾಗಿ ಪಿಂಚಣಿ ಮಂಜೂರು ಮಾಡಲಾಗಿದೆ.<br><br>ಅಲ್ಲದೇ ದೂರವಾಣಿ ಮೂಲಕವೇ ಪಿಂಚಣಿ ಕೋರಿಕೆ ಸ್ವೀಕರಿಸಿ 72 ಗಂಟೆಯಲ್ಲಿ ಪಿಂಚಣಿ ಮಂಜೂರಾತಿ ಮಾಡುವ ವಿನೂತನ ಕಾರ್ಯಕ್ರಮವನ್ನು ಪ್ರಸಕ್ತ ಸಾಲಿನಲ್ಲಿ ಅನುಷ್ಠಾನಗೊಳಿಸಲಾಗಿದ್ದು, ಸದರಿ ಯೋಜನೆಯಡಿಯಲ್ಲಿ ಇದುವರೆಗೆ 38,854 ಕರೆಗಳನ್ನು ಸ್ವೀಕರಿಸಲಾಗಿದ್ದು, ಈ ಪೈಕಿ 30,333 ಅರ್ಹ ಪ್ರಕರಣಗಳಲ್ಲಿ ಹೊಸದಾಗಿ ಪಿಂಚಣಿ ಮಂಜೂರಾತಿ ಆದೇಶ ನೀಡಲಾಗಿದೆ. |

**ಸಂಖ್ಯೆ: DSSP/LCQ/26/2022**

(ಆರ್.ಅಶೋಕ)
ಕಂದಾಯ ಸಚಿವರು

(12) STD 21-9-2022

<u>ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) ರವರ ಚುಕ್ಕೆ ಗುರುತಿನ ಪ್ರ ಸಂ 117(1023) ಕ್ಕೆ ಪೂರಕ ಟಿಪ್ಪಣಿ</u>

1) ಸರ್ಕಾರವು ಅಸಹಾಯಕ, ಅಶಕ್ತ ವೃಂದದ ವೃದ್ಧರು, ವಿಧವೆಯರು, ಅಂಗವಿಕಲರು, ಅವಿವಾಹಿತ / ವಿಚ್ಛೇದಿತ ಮಹಿಳೆಯರಿಗೆ, ಲಿಂಗತ್ವ ಅಲ್ಪಸಂಖ್ಯಾತ ವರ್ಗಗಳಲ್ಲಿನ ಬಡತನ ರೇಖೆಗಿಂತ ಕೆಳಗಿರುವವರಿಗೆ ಆರ್ಥಿಕ ಭದ್ರತೆ ಒದಗಿಸಿ ಸಮಾಜದ ಮುಖ್ಯ ವಾಹಿನಿಗೆ ತರುವಲ್ಲಿ ಒಟ್ಟು 9 ಮಾಸಿಕ ಪಿಂಚಣಿ ಯೋಜನೆಗಳನ್ನು ಮತ್ತು 4 ಒಂದು ಬಾರಿ ಸಹಾಯಧನ ನೀಡುವ ಯೋಜನೆಗಳನ್ನು ಅನುಷ್ಠಾನಗೊಳಿಸಿದೆ: ವಿವರ ಕೆಳಗಿನಂತಿದೆ.

| ಕ್ರ ಸಂ | ಯೋಜನೆಯ ಹೆಸರು |
|---|---|
| **ಮಾಸಿಕ ಪಿಂಚಣಿ ಯೋಜನೆಗಳು** | |
| 1 | ಇಂದಿರಾಗಾಂಧಿ ವೃದ್ಧಾಪ್ಯ ವೇತನ |
| 2 | ಇಂದಿರಾಗಾಂಧಿ ವಿಧವಾ ವೇತನ |
| 3 | ಇಂದಿರಾಗಾಂಧಿ ಅಂಗವಿಕಲ ವೇತನ |
| 4 | ಸಂಧ್ಯಾಸುರಕ್ಷಾ ವೇತನ |
| 5 | ಮನಸ್ವಿನಿ ಯೋಜನೆ |
| 6 | ಮೈತ್ರಿ ಯೋಜನೆ |
| 7 | ಸಾಲಭಾಧೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತ ಪತ್ನಿಯರಿಗೆ ವಿಧವಾ ವೇತನ |
| 8 | ಆಸಿಡ್ ದಾಳಿಗೊಳಗಾದ ಮಹಿಳೆಯರಿಗೆ ಸಹಾಯಧನ |
| 9 | ಎಂಡೋಸಲ್ಫಾನ್ ಸಂತ್ರಸ್ತರಿಗೆ ಮಿತವೇತನ |
| **ಒಂದು ಬಾರಿ ಸಹಾಯಧನ** | |
| 1 | ರಾಷ್ಟ್ರೀಯ ಕುಟುಂಬ ನೆರವು ಯೋಜನೆ |
| 2 | ಆದರ್ಶ ವಿವಾಹ ಯೋಜನೆ |
| 3 | ಸಾಲಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತ ಕುಟುಂಬಕ್ಕೆ ಪರಿಹಾರ / ಬಣವೆ ನಷ್ಟ/ ಹಾವು ಕಡಿತ. ಆಕಸ್ಮಿಕ ಮರಣ ಪ್ರಕರಣಗಳಡಿ ಪರಿಹಾರ |
| 4 | ಕೋವಿಡ್-19 ವೈರಾಣು ಸೋಂಕಿನಿಂದ ಮೃತಪಟ್ಟ ವಾರಸುದಾರರಿಗೆ ಪರಿಹಾರ |

ಎಂಡೋಸಲ್ಫಾನ್ ಮಿತವೇತನ ಯೋಜನೆಯು ದಕ್ಷಿಣ ಕನ್ನಡ, ಉತ್ತರಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಮಾತ್ರ ಅನುಷ್ಠಾನದಲ್ಲಿದ್ದು, ಉಳಿದಂತೆ ಎಲ್ಲಾ ಸಾಮಾಜಿಕ ಭದ್ರತಾ ಯೋಜನೆಗಳನ್ನು ರಾಜ್ಯಾದ್ಯಂತ ಅನುಷ್ಠಾನಗೊಳಿಸಲಾಗಿದೆ.

2) ಪ್ರಸ್ತುತ ರಾಜ್ಯದಲ್ಲಿ ಒಟ್ಟು 75.60 ಲಕ್ಷ ಫಲಾನುಭವಿಗಳಿಗೆ ವಿವಿಧ ಯೋಜನೆಗಳಡಿ ಮಾಸಿಕ ಪಿಂಚಣಿ ಸೌಲಭ್ಯ ನೀಡಲಾಗುತ್ತಿದೆ. 2022-23 ನೇ ಸಾಲಿನಲ್ಲಿ ಪಿಂಚಣಿ ಯೋಜನೆಗಳಲ್ಲಿ ರೂ 9483.51 ಕೋಟಿ ಅನುದಾನವನ್ನು ಮೀಸಲಿರಿಸಿದೆ. ಮಾಸಿಕ ರೂ 780.00 ಕೋಟಿ ವೆಚ್ಚ ಭರಿಸಲಾಗುತ್ತಿದೆ.

3) ಆಗಿದ್ದಾಗ್ಗೆ, ಹಣದುಬ್ಬರ ಆರ್ಥಿಕ ಸ್ಥಿತಿಗತಿಗಳನ್ನು ಗಮನದಲ್ಲಿರಿಸಿ ಕಾಲಕಾಲಕ್ಕೆ ಪಿಂಚಣಿ ಮೊತ್ತವನ್ನು ಪರಿಷ್ಕರಿಸಿ ಬಡತನ, ನಿರ್ಗತಿಕತೆ ಹಾಗೂ ಅನಿಶ್ಚಿತ ಪರಿಸ್ಥಿತಿಗಳನ್ನು ನಿಭಾಯಿಸಲು ಅಸಹಾಯಕ ವೃಂದದ ಜನ ಸಮುದಾಯಕ್ಕೆ ರಕ್ಷಣೆಯನ್ನು ಹಾಗೂ ಸಾಮಾಜಿಕ ನ್ಯಾಯವನ್ನು

ನಿರಂತರವಾಗಿ ಒದಗಿಸುತ್ತಿದೆ. ಇತ್ತೀಚಿನ ದಿನಗಳಲ್ಲಿ ವಿವಿಧ ಪಿಂಚಣಿ ಯೋಜನೆಗಳಲ್ಲಿ ಪಿಂಚಣಿ ಮೊತ್ತವನ್ನು ಹೆಚ್ಚಿಸಲಾಗಿದ್ದು, ವಿವರ ಕೆಳಕಂಡಂತಿದೆ.

| ಕ್ರ ಸಂ | ಯೋಜನೆಯ ಹೆಸರು | ಪರಿಷ್ಕೃತ ಪಿಂಚಣಿ ಜಾರಿ ದಿನಾಂಕ | ಈ ಹಿಂದೆ ಇದ್ದ ಪಿಂಚಣಿ ಮೊತ್ತ | ಹೆಚ್ಚಿಸಲಾದ ಪಿಂಚಣಿ ಮೊತ್ತ |
|---|---|---|---|---|
| 1 | 1) ವೃದ್ಧಾಪ್ಯ ವೇತನ,<br>2) ಸಂಧ್ಯಾಸುರಕ್ಷಾ ವೇತನ<br>(65 ವರ್ಷ ಮೇಲ್ಪಟ್ಟ ಹಿರಿಯ ನಾಗರೀಕರಿಗೆ | 01-08-2021 | 1000/- | 1200/- |
| 2 | ನಿರ್ಗತಿಕ ವಿಧವಾ ವೇತನ | | 600/- | 800/- |
| 3 | ಅಂಗವಿಕಲ ವೇತನ<br>(ಶೇ 40 ರಿಂದ 75 ರವರೆಗಿನ ಅಂಗವಿಕಲತೆ) | | 600/- | 800/- |
| 4 | ಅಂಗವಿಕಲ ವೇತನ<br>(ಶೇ 75 ಕ್ಕಿಂತ ಹೆಚ್ಚಿನ ಮನೋವೈಕಲ್ಯತೆ ಹೊಂದಿರುವವರಿಗೆ) | 01-12-2021 | 1400/- | 2000/- |
| 5 | ಮನಸ್ವಿನಿ | 01-04-2022 | 600/- | 800/- |
| 6.. | ಮೈತ್ರಿ | | 600/- | 800/- |
| 7 | ಆಸಿಡ್ ದಾಳಿಗೊಳಗಾದ ಮಹಿಳೆಯರಿಗೆ | | 3,000/- | 10,000/- |

4) ಕುಟುಂಬ ದತ್ತಾಂಶದಿಂದ ಫಲಾನುಭವಿಗಳ ಆದಾಯ ಹಾಗೂ ವಯೋಮಿತಿ ಆಧಾರದ ಮೇಲೆ ಸ್ವಯಂ ಪ್ರೇರಿತವಾಗಿ ಅರ್ಹ ಫಲಾನುಭವಿಗಳನ್ನು ಗುರುತಿಸಿ ಪಡೆಯಲಾದ ಮಾಹಿತಿಯಂತೆ ಅರ್ಜಿ ರಹಿತವಾಗಿ ಮನೆಬಾಗಿಲಿಗೆ ಪಿಂಚಣಿ ಸೌಲಭ್ಯ ತಲುಪಿಸುವ ಉದ್ದೇಶದಿಂದ "ನವೋದಯ" ಮೊಬೈಲ್ ಆ್ಯಪ್ ಬಳಸಿ ಫಲಾನುಭವಿಗಳಿಂದ ಮಾಹಿತಿ ಸಂಗ್ರಹಿಸಿ, ಭಾವಚಿತ್ರ ಹಾಗೂ ಖಾತೆಯ ಮಾಹಿತಿ ಪಡೆದು ತಿಳುವಳಿಕೆ ಪತ್ರ ನೀಡಿ ಮನೆಬಾಗಿಲಿಗೆ ಮಂಜೂರಾತಿ ಆದೇಶ ವಿತರಿಸಿ ಪಿಂಚಣಿ ಪಾವತಿಸುವ ಅಭಿಯಾನವನ್ನು 2020-21 ರಲ್ಲಿ ಜಾರಿಗೊಳಿಸಲಾಗಿದ್ದು, ಇದುವರೆವಿಗೆ 71,632 ಫಲಾನುಭವಿಗಳಿಗೆ ಸ್ವಯಂಪ್ರೇರಿತವಾಗಿ ಪಿಂಚಣಿ ಮಂಜೂರು ಮಾಡಲಾಗಿದೆ.

5) ಅಸಹಾಯಕ ವೃದ್ಧರು, ಅಂಗವಿಕಲರು, ದುರ್ಬಲರು ಪಿಂಚಣಿಗಾಗಿ ಅಲೆದಾಡುವುದನ್ನು ತಪ್ಪಿಸುವ ಉದ್ದೇಶದಿಂದ ದೂರವಾಣಿ ಮುಖಾಂತರ ಪಿಂಚಣಿ ಕೋರಿಕೆಯನ್ನು ಸಲ್ಲಿಸಲು ಅನುಕೂಲವಾಗುವಂತೆ ಸಹಾಯವಾಣಿಯನ್ನು ಆರಂಭಿಸಲಾಗಿದ್ದು ಟೋಲ್ ಫ್ರೀ ಸಂಖ್ಯೆಯನ್ನು ನೀಡಲಾಗಿದೆ. ದೂರವಾಣಿ ಮೂಲಕವೇ ಪಿಂಚಣಿ ಕೋರಿಕೆಯನ್ನು ಸ್ವೀಕರಿಸಿ 72 ಗಂಟೆಯಲ್ಲಿ ಪಿಂಚಣಿ ಮಂಜೂರಾತಿ ಮಾಡುವ ವಿನೂತನ ಕಾರ್ಯಕ್ರಮವನ್ನು ಪ್ರಸಕ್ತ ಸಾಲಿನಲ್ಲಿ ಅನುಷ್ಠಾನಗೊಳಿಸಲಾಗಿದ್ದು, ಈ ಸಹಾಯವಾಣಿ ಮುಖಾಂತರ ಪಡೆದ ಪಿಂಚಣಿ ಕೋರಿಕೆಯನ್ನು ನವೋದಯ ಮೊಬೈಲ್ ಆ್ಯಪ್ ಮುಖಾಂತರ ಅರ್ಜಿದಾರರ ಮನೆಬಾಗಿಲಿನಲ್ಲೇ ಪರಿಶೀಲನೆ ಮಾಡಿ ಪಿಂಚಣಿ ಆದೇಶವನ್ನು ಮನೆಬಾಗಿಲಿಗೆ ವಿತರಿಸಲಾಗುತ್ತಿದೆ. ಸದರಿ ಯೋಜನೆಯಡಿಯಲ್ಲಿ ಇದುವರೆವಿಗೆ 38,854 ಕರೆಗಳನ್ನು ಸ್ವೀಕರಿಸಲಾಗಿದ್ದು, ಈ ಪೈಕಿ 30,333 ಅರ್ಹ ಫಲಾನುಭವಿಗಳಿಗೆ ಹೊಸ ಮಂಜೂರಾತಿ ಆದೇಶ ನೀಡಲಾಗಿದೆ.

—*—*—